1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಮಗಳೂರು

**ವಿಶೇಷ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ನಂಜಪ್ಪ | ಪಿಡಬ್ಲೂ - 22 |
| ತಂದೆಯ ಹೆಸರು | - ಸಿದ್ದಲಿಂಗಶೆಟ್ಟಿ | ಸಿಡಬ್ಲೂ - 27 |
| ವಯಸ್ಸು | - 52 ವರ್ಷ | |
| ಉದ್ಯೋಗ | - ಮುಖ್ಯ ಪೇದೆ 27, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಚಿಕ್ಕಮಗಳೂರು | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

1. 2016 ರಿಂದ 2022 ರವರೆಗೆ ನಾನು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 19-11-2021 ರಂದು ಫ್ರಾಸಾ.18 ರವರು ನನ್ನನ್ನು ಮತ್ತು ಚಾಸಾ.26 ರವರನ್ನು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಮೊ.ಸಂಃ 352/2021 ರ ಆರೋಪಿಯ ಪತ್ತೆಗಾಗಿ ಮೌಖಿಕವಾಗಿ ನೇಮಿಸಿ ಕಳುಹಿಸಿದ್ದರು.

3. ಅದರಂತೆ ನಾವು ಅದೇ ದಿನ ಆರೋಪಿಯ ಪತ್ತೆಗಾಗಿ ಕಡೂರು, ಸಿಂಗಟಗೆರೆ, ಪಂಚನಹಳ್ಳಿ ಕಡೆ ಹೋಗಿ ಆತನ ಬಗ್ಗೆ ಮಾಹಿತಿ ಸಂಗ್ರಹಿಸಿದೆವು. ಬಾತ್ಮೀದಾರರಿಂದ ಆರೋಪಿ ದಿಃ 20-11-2021 ರಂದು ಕಂಚುಕಲ್ ಗ್ರಾಮದಲ್ಲಿರುವ ತನ್ನ ಜಮೀನಿನ ಹತ್ತಿರ ಹೋಗಲು ರಸ್ತೆಯಲ್ಲಿ ಹೋಗುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ನಾವು ದಿಃ 20-11-2021 ರಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ ಕಂಚುಕಲ್ ಗ್ರಾಮಕ್ಕೆ ಹೋಗಿ ರಸ್ತೆಯಲ್ಲಿ ಹೋಗುತ್ತಿದ್ದ ಆರೋಪಿಯನ್ನು ಹಿಡಿದು ಆತನ ಹೆಸರು ಮತ್ತು ವಿಳಾಸವನ್ನು ಕೇಳಿ ಪಡೆದುಕೊಂಡೆವು. ಆತನನ್ನು ಕುರಿತು ಕಬ್ಬಿನಹಳ್ಳಿ ರಮೇಶಗೌಡರವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮನು ನೀನೇ ಅಲ್ಲವೇ ಎಂದು ಕೇಳಿದಾಗ ಆತ ಹೌದು ಎಂದು ತಿಳಿಸಿದ್ದರಿಂದ ಆತನನ್ನು ವಶಕ್ಕೆ ಪಡೆದು ಬೆಳಿಗ್ಗೆ 9 ಗಂಟೆಗೆ ಠಾಣೆಗೆ ಹಿಂದಿರುಗಿ ಫ್ರಾಸಾ.18 ರವರ ಮುಂದೆ ಹಾಜರುಪಸಿಡಿದೆವು. ಆ ಬಗ್ಗೆ ನಾನು ಫ್ರಾಸಾ.18 ರವರಿಗೆ ವರದಿಯನ್ನು ಕೊಟ್ಟೆನು. ಸಾಕ್ಷಿಯು ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ವರದಿಯನ್ನು ಈಗಾಗಲೇ ನಿಪಿ.42 ಎಂದು ಗುರುತಿಸಲಾಗಿದ್ದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.42(ಬಿ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಆ ದಿನ ನಾವು ವಶಕ್ಕೆ ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ ವ್ಯಕ್ತಿ ಆತನೇ ಎಂದು ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

5. ದಿಃ 19-11-2021 ರಂದು ಬೆಳಿಗ್ಗೆ 9 ಗಂಟೆಗೆ ಪ್ರಾಸಾ.18 ರವರು ಆರೋಪಿಯ ಪತ್ತೆಗಾಗಿ ನಮ್ಮನ್ನು ನೇಮಿಸಿದ್ದರು. ಆ ದಿನ ರೋಲಕಾಲಿನಲ್ಲಿ ನಿಮ್ಮನ್ನು ಯಾವ ಕೆಲಸಕ್ಕೆ ನೇಮಿಸಲಾಗಿತ್ತು ಎಂದರೆ ಸಾಕ್ಷಿ ಆರೋಪಿಯ ಪತ್ತೆ ಕಾರ್ಯಕ್ಕೆ ಎನ್ನುತ್ತಾರೆ. ಬೆಳಿಗ್ಗೆ 7 ರಿಂದ 8 ಗಂಟೆಯವರೆಗೆ ರೋಲಕಾಲ್ ಮಾಡಲಾಗುತ್ತದೆ ಎಂದರೆ ಸಾಕ್ಷಿ ಆ ದಿನ ಬೆಳಿಗ್ಗೆ 9 ಗಂಟೆಗೆ ರೋಲಕಾಲ್ ಮಾಡಲಾಗಿತ್ತು ಎನ್ನುತ್ತಾರೆ. ಎಲ್ಲಾ ಠಾಣೆಯಲ್ಲಿ

ಬೆಳಿಗ್ಗೆ 7 ಗಂಟೆಗೆ ರೋಲಕಾಲ್ ಮಾಡಲಾಗುತ್ತದೆ ಎಂದರೆ ಸಾಕ್ಷಿ ಕೆಲವರು ಮಾಡುತ್ತಾರೆ ಎನ್ನುತ್ತಾರೆ.

6. ನಿಮ್ಮನ್ನು ಆರೋಪಿಯ ಪತ್ತೆ ಕಾರ್ಯಕ್ಕೆ ಕಳುಹಿಸುವ ಸಮಯದಲ್ಲಿ ಆತನ ಚಹರೆ ವಿವರಗಳನ್ನು ನೀಡಲಾಗಿತ್ತೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿಯ ಪತ್ತೆ ಕಾರ್ಯಕ್ಕೆ ಹೋದಾಗ ಯಾವ, ಯಾವ ಸ್ಥಳಸಿಗಳಿಗೆ ಭೇಟಿ ನೀಡಲಾಯಿತು, ಅವು ಯಾವ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ, ಅಲ್ಲಿ ಏನ್ನೆಲ್ಲಾ ನೋಡಲಾಯಿತು ಮತ್ತು ಯಾರನ್ನೆಲ್ಲಾ ಪ್ರಶ್ನೆ ಮಾಡಲಾಯಿತು ಎಂದು ನೋಟ್ಸ್ ಮಾಡಿಕೊಳ್ಳುವುದು ಕಡ್ಡಾಯ ಎಂದರೆ ಸರಿಯಲ್ಲ. ಆ ರೀತಿ ಮಾಡಿಕೊಂಡ ನೋಟ್ಸ್ ನ್ನು ರೋಲಕಾಲ್ ಮಾಡುವ ಸಮಯದಲ್ಲಿ ಠಾಣಾಧಿಕಾರಿಗಳಿಗೆ ನೀಡುವುದು ಕಡ್ಡಾಯ ಎಂದರೆ ಸರಿಯಲ್ಲ.

7. ನೀವು ಭೇಟಿ ನೀಡಿದ್ದೀರಿ ಎನ್ನಲಾದ ಯಾವುದೇ ಸ್ಥಳಗಳು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿ. ಕಂಚುಕಲ್ ಗ್ರಾಮದಿಂದ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಗೆ 60 ಕಿಮೀ ದೂರವಾಗುತ್ತದೆ. ಆರೋಪಿಯನ್ನು ವಶಕ್ಕೆ ಪಡೆದ ಬಳಿಕ ಆತನನ್ನು ಬಸ್ಸಿನಲ್ಲಿ ಅಲ್ಲಿಂದ ಠಾಣೆಗೆ ಕರೆದುಕೊಂಡು ಹೋದೆವು. ಆ ರೀತಿ ಬಸ್ಸಿನಲ್ಲಿ ಪ್ರಯಾಣಿಸಿದ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕಂಚುಕಲ್ ಗ್ರಾಮದ ಪಂಚನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ.

ನೀವು ಸದರಿ ಠಾಣೆಗೆ ಮಾಹಿತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

8. ನಿಪಿ.42 ವರದಿಯನ್ನು ನೀವು ಠಾಣೆಗೆ ಹಿಂದಿರುಗಿದ ಬಳಿಕ ತಯಾರಿಸಿದ್ದೀರಿ ಎಂದರೆ ಸರಿ. ದಿಃ 19-11-2021 ರಿಂದಲೇ ಆರೋಪಿ ತನಿಖಾಧಿಕಾರಿಗಳ ವಶದಲ್ಲಿದ್ದನು ಎಂದರೆ ಸರಿಯಲ್ಲ. ನೀವು ಆತನನ್ನು ದಿಃ 20-11-2021 ರಂದು ಬೆಳಿಗ್ಗೆ 7 ಗಂಟೆಗೆ ಕಂಚುಕಲ್ ಗ್ರಾಮದಲ್ಲಿ ವಶಕ್ಕೆ ಪಡೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. ಆರೋಪಿಯನ್ನು ವಶಕ್ಕೆ ಪಡೆದಾಗ ಆತನ ಅಂಗಶೋಧನೆಯನ್ನು ಮಾಡಿಲ್ಲ. ದಿಃ 19-11-2021 ರಂದು ಯಾವ ಯಾವ ಸ್ಥಳಗಳಲ್ಲಿ ಆರೋಪಿಯನ್ನು ಹುಡುಕಲಾಯಿತು ಎಂದು ಠಾಣಾಧಿಕಾರಿಗಳಿಗೆ ರೋಲಕಾಲ್ ಸಮಯದಲ್ಲಿ ವರದಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಆ ದಿನ ನಾವು ಠಾಣೆಗೆ ವಾಪಸ್ ಹೋಗಲಿಲ್ಲ, ದಿಃ 20-11-2021 ರಂದು ಆ ಬಗ್ಗೆ ವರದಿ ಕೊಟ್ಟಿದ್ದೇನೆ ಎನ್ನುತ್ತಾರೆ. ದಿಃ 19-11-2021 ರಂದು ರಾತ್ರಿ ನಾವು ಸಿಂಗಟಗೆರೆಯಲ್ಲಿ ಉಳಿದುಕೊಂಡಿದ್ದೆವು. ಆ ಬಗ್ಗೆ ನೀವು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

10. ನೀವು ಹೇಳಿದಂತೆ ಆರೋಪಿಯ ಪತ್ತೆ ಕಾರ್ಯಕ್ಕೆ ನಿಮ್ಮನ್ನು ನೇಮಿಸಲಾಗಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳು ನಿಪಿ.42 ರಂತೆ ತಯಾರಿಸಿಕೊಟ್ಟ ವರದಿಗೆ

ನೀವು ಕೇವಲ ಸಹಿ ಮಾಡಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನಿಪಿ.42 ಕ್ಕೆ ಚಾಸಾ.26 ರವರ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ನಾನೇ ಹಿರಿಯ ಸಿಬ್ಬಂದಿಯಾಗಿದ್ದ ಕಾರಣ ನಾನು ವರದಿ ಕೊಟ್ಟರೆ ಸಾಕಾಗುತ್ತದೆ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ